**ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ**
**ವಿ.ಐ.ಟಿ.ಸಿ. ಕಟ್ಟಡ, ಕಸ್ತೂರಬಾ ರಸ್ತೆ,**
**ಬೆಂಗಳೂರು-560 001**

**2017-18ನೇ ಸಾಲಿಗೆ ತೆಂಗು ನಾರಿನ ವಲಯಕ್ಕೆ ನೆರವು (ತೆಂಗು ಭಾಗ್ಯ ಯೋಜನೆ) ಯೋಜನೆಯಡಿಯಲ್ಲಿ ನಿಗಮದ ಹಮ್ಮಿಕೊಳ್ಳಲು ಉದ್ದೇಶಿಸಿರುವ ಯೋಜನೆಗಳ ವಿವರ**

**1. ಹೆಚ್ಚಿನ ತಂತ್ರಜ್ಞಾನ ಹೊಂದಿದ ಹೊಸ ಯಂತ್ರೋಪಕರಣಗಳ ಅಳವಡಿಕೆ :**

ನಿಗಮದಲ್ಲಿ ಹಾಲಿ ತೆಂಗು ನಾರು ಉತ್ಪಾದನಾ ಘಟಕಗಳಲ್ಲಿ ಹಳೆ ತಂತ್ರಜ್ಞಾನವುಳ್ಳ ಯಂತ್ರೋಪಕರಣಗಳು ಉತ್ಪಾದನೆಯಲ್ಲಿ ತೊಡಗಿದ್ದು, ನಿರೀಕ್ಷಿತ ಉತ್ಪಾದನೆಯಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ನಿಗಮ ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು, ನವಿಲೆ ತಿಮ್ಮಾಲಾಪುರ ಹಾಗೂ ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು, ರಂಗನಾಥಪುರ ಗ್ರಾಮದಲ್ಲಿರುವ ನಿಗಮದ ತೆಂಗಿನ ನಾರು ಉತ್ಪಾದನಾ ಘಟಕವನ್ನು ಉನ್ನತೀಕರಿಸುವ ಉದ್ದೇಶದಿಂದ ಹೊಸ ತಂತ್ರಜ್ಞಾನವುಳ್ಳ ಹೊಸ ಯಂತ್ರೋಪಕರಣಗಳನ್ನು ಅಳವಡಿಸಿದಲ್ಲಿ ಹೆಚ್ಚು ಉತ್ಪಾದನೆಗೆ ಕ್ರಮವಹಿಸಬಹುದಾಗಿದೆ. ಇದರಿಂದ ನಿಗಮದ ಆರ್ಥಿಕ ಸುಧಾರಣೆಗೆ ಒತ್ತು ನೀಡಿದಂತಾಗುತ್ತದೆ. ಇದಕ್ಕಾಗಿ ಒಟ್ಟು ರೂ.140.80 ಲಕ್ಷಗಳ ಅನುದಾನ ಅವಶ್ಯಕವಿರುತ್ತದೆ.

**2. ಹಾಲಿ ಉತ್ಪಾದನಾ ಘಟಕಗಳಲ್ಲಿರುವ ಯಂತ್ರೋಪಕರಣಗಳ ದುರಸ್ಥಿ ಮತ್ತು ನಿರ್ವಹಣೆ :**

ನಿಗಮದಲ್ಲಿ ಒಟ್ಟು 53 ಉತ್ಪಾದನಾ ಘಟಕಗಳು ವಿವಿಧ ತೆಂಗಿನ ನಾರಿನ ಉತ್ಪನ್ನಗಳ ತಯಾರಿಕೆಯಲ್ಲಿ ತೊಡಗಿದ್ದು, ಈಗಾಗಲೇ ವಿವಿಧ ಉತ್ಪನ್ನಗಳ ತಯಾರಿಕೆಗಾಗಿ ಯಂತ್ರೋಪಕರಣಗಳನ್ನು ಅಳವಡಿಸಿದ್ದು, ಈ ಯಂತ್ರೋಪಕರಣಗಳು ನಿರಂತರ ಉತ್ಪಾದನೆ ಪ್ರಕ್ರಿಯೇಯಲ್ಲಿರುವುದರಿಂದ, ಆಗ್ಗಿಂದಾಗ್ಗೆ ದುರಸ್ಥಿಗೆ ಒಳಪಡುತ್ತಿರುತ್ತವೆ. ಈ ತೊಡಕುಗಳನ್ನು ನಿವಾರಿಸಿ, ನಿರಂತರ ಉತ್ಪಾದನೆಯಲ್ಲಿ ಯಂತ್ರೋಪಕರಣಗಳನ್ನು ತೊಡಗಿಸಿಕೊಳ್ಳಲು ಸುಮಾರು ರೂ.20.00 ಲಕ್ಷಗಳ ಅನುದಾನ ಮಂಜೂರಾತಿ ಕೋರಲಾಗಿದೆ.

**3. ಹಾಲಿ ಉತ್ಪಾದನಾ ಘಟಕದಳ ಕಟ್ಟದ ದುರಸ್ಥಿ ಮತ್ತು ನಿರ್ವಹಣೆ :**

ನಿಗಮದಲ್ಲಿ ಹಾಲಿ 53 ಉತ್ಪಾದನಾ ಘಟಕಗಳಲ್ಲಿ ತರಬೇತಿ ಹಾಗೂ ಉತ್ಪಾದನಾ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿದ್ದು, ಈ ಕಟ್ಟಡಗಳು ಸುಮಾರು 15-20 ವರ್ಷಗಳ ಹಳೆಯವುಗಳಾಗಿದ್ದು, ಇವುಗಳ ದುರಸ್ಥಿ ಹಾಗೂ ನಿರ್ವಹಣೆ ಅತ್ಯವಶ್ಯಕವಾಗಿದೆ. ಈ ನಿಟ್ಟಿನಲ್ಲಿ ನಿಗಮ ಕೆಲವು ಹಳೆಯ ಶೀಥಿಲಗೊಂಡಿರುವ ಉತ್ಪಾದನಾ ಘಟಕದ ಕಟ್ಟಡಗಳ ದುರಸ್ಥಿ ಮತ್ತು ನಿರ್ವಹಣೆಗೆ ಕ್ರಮ ವಹಿಸಲು ಉದ್ದೇಶಿಸಿದ್ದು, ಇದಕ್ಕೆ ಒಟ್ಟು ರೂ.18.80 ಲಕ್ಷಗಳ ಅನುದಾನ ಕೋರಿದೆ.

**ಮೊದಲ ತ್ರೈಮಾಸಿಕ ಅವಧಿಗೆ ಬಿಡುಗಡೆ ಮಾಡಬೇಕಾಗಿರುವ ಅನುದಾನದ ವಿವರ**

| ಕ್ರ.ಸಂ. | ಯೋಜನೆ | ಚಟುವಟಿಕೆಗಳ ವಿವರ | ಆರ್ಥಿಕ (ರೂ.ಲಕ್ಷಗಳಲ್ಲಿ) | ಭೌತಿಕ (ಸಂ.) |
|---|---|---|---|---|
| 1 | ತೆಂಗು ಭಾಗ್ಯ - ನಾರಿನ ವಲಯಕ್ಕಾಗಿ ನೆರವು 2851-00-106-0-12 (059) | ಹೆಚ್ಚಿನ ತಂತ್ರಜ್ಞಾನ ಹೊಂದಿದ ಹೊಸ ಯಂತ್ರೋಪಕರಣಗಳ ಅಳವಡಿಕೆ - ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು, ರಂಗನಾಥಪುರ ನಾರು ಉತ್ಪಾದನಾ ಘಟಕ. | 140.80 | 2 |
| 2 | | ಹಾಲಿ ಉತ್ಪಾದನಾ ಘಟಕಗಳಲ್ಲಿರುವ ಯಂತ್ರೋಪಕರಣಗಳ ದುರಸ್ಥಿ ಮತ್ತು ನಿರ್ವಹಣೆ | 20.00 | 30 |
| 3 | | ಹಾಲಿ ಉತ್ಪಾದನಾ ಘಟಕದಳ ಕಟ್ಟದ ದುರಸ್ಥಿ ಮತ್ತು ನಿರ್ವಹಣೆ | 18.80 | 5 |
| | | **ಒಟ್ಟು** | **179.60** | **37** |

ವ್ಯವಸ್ಥಾಪಕ ನಿರ್ದೇಶಕರು